


# ಸೀಪ್ ಗಾರ್ಡ್ ವರ್ಟಿಕಲ್ ಸರ್ಫೇಸಸ್

## *ಹೊರಾಂಗಣದ ಪ್ಲಾಸ್ಟರ್ ಮಾಡಿದ ಲಂಬದ (ವರ್ಟಿಕಲ್) ಗೋಡೆಗಳಿಗೆ ಬಿಳಿ ಸಿಮೆಂಟಿನಂತಹ ಒಂದು ಘಟಕ ಶಾಖವನ್ನು ಪ್ರತಿಫಲಿಸುವ ವಾಟರ್‌ಪ್ರೂಫ್ ಕೋಟಿಂಗ್*

ಸೀಪ್ ಗಾರ್ಡ್ ವರ್ಟಿಕಲ್ ಸರ್ಫೇಸಸ್ ಎಂಬುದು ಹೊರಾಂಗಣದ ಪ್ಲಾಸ್ಟರ್ ಮಾಡಿದ ಲಂಬದ (ವರ್ಟಿಕಲ್) ಗೋಡೆಗಳಿಗೆ / ಕಾಂಕ್ರೀಟಿನ ಮೇಲ್ಮೈಗಳಿಗೆ ಸೂಕ್ತವಾದ ಪಾಲಿಮರ್ ಮಾಡಿಫೈಡ್, ಬಿಳಿ ಸಿಮೆಂಟಿನಂತಹ, ಇಲ್ಯಾಸ್ಟೋಮೆರಿಕ್, ಉಚ್ಚ ಪರ್ಫಾರ್ಮೆನ್ಸ್‌ನ ಕೋಟಿಂಗ್ ಸಿಸ್ಟಮ್ ಆಗಿದೆ. ಇದನ್ನು ಇಲ್ಯಾಸ್ಟೋಮೆರಿಕ್ ಜರ್ಮನ್ ಪಾಲಿಮರ್ಸ್ ಮತ್ತು ಬಿಳಿ ಸಿಮೆಂಟಿನಿಂದ ರಚಿಸಲಾಗಿದೆ. ಇದು ಮೇಲ್ಮೈ ಮೇಲೆ ಇರುವ ಎಲ್ಲಾ ಸೂಕ್ಷ್ಮ ಬಿರುಕುಗಳನ್ನೂ ಮುಚ್ಚುತ್ತದೆ ಮತ್ತು ಗೋಡೆಗಳ ಮೂಲಕ ನೀರು ಒಳಗೆ ಸೀಪ್ ಆಗದಂತೆ ತಡೆಯುತ್ತದೆ. ಈ ರೀತಿಯಲ್ಲಿ ಇದು ಕಟ್ಟಡವನ್ನು ನೀರಿಗೆ-ಸಂಬಂಧಿಸಿದ ಡ್ಯಾಮೇಜುಗಳಿಂದ ರಕ್ಷಿಸುತ್ತದೆ ಮತ್ತು ಟಾಪ್ ಕೋಟ್ ಪೇಯಿಂಟ್‌ನ ಬಾಳಿಕೆಯನ್ನು ಕಾಪಾಡಿಕೊಂಡು ಬರುತ್ತದೆ.

### ಹಚ್ಚುವ ಏರಿಯಗಳು

- ಎಲ್ಲಾ ರೀತಿಯ ಹೊಸ ಮತ್ತು ಹಾಲಿ ಇರುವ ಹೊರಾಂಗಣದ ಕಾಂಕ್ರೀಟ್, ಆರ್‌ಸಿಸಿ ಮತ್ತು ಸಿಮೆಂಟಿನಂತಹ ಮೇಲ್ಮೈಗಳು.
- ಬಂಗಲೋಗಳ ಹೊರಗಡೆಯ ಗೋಡೆಗಳು, ಕಟ್ಟಡಗಳ ಹೊರಗಡೆಯ ಗೋಡೆಗಳು.

### ಪ್ರಾಡಕ್ಟ್‌ನ ವಿಶೇಷತೆಗಳು ಮತ್ತು ಪ್ರಯೋಜನಗಳು

- **ವಾಟರ್‌ಪ್ರೂಫಿಂಗ್:** ಪಾಸಿಟಿವ್ ಹೈಡ್ರೋಸ್ಟ್ಯಾಟಿಕ್ ಪ್ರೆಶರ್‌ನ 5 ಬಾರ್‌ಗಳ ವರೆಗೆ ವಾಟರ್‌ಪ್ರೂಫಿಂಗ್ ರಕ್ಷಣೆ.
- **ಅಂಟಿಕೊಳ್ಳುವುದು:** ಆರ್‌ಸಿಸಿ, ಕಾಂಕ್ರೀಟ್ ಮತ್ತು ಸಿಮೆಂಟಿನಂತಹ ಮೇಲ್ಮೈಗಳಿಗೆ ತುಂಬಾ ಗಟ್ಟಿಯಾಗಿ ಅಂಟಿಕೊಳ್ಳುತ್ತದೆ.
- **ಬಾಳಿಕೆ:** ನಿಮ್ಮ ಕಟ್ಟಡದ ಮೇಲ್ಮೈಯನ್ನು ಲೀಕೇಜ್ ಮತ್ತು ಸೀಪೇಜ್‌ನ ಡ್ಯಾಮೇಜ್‌ಗಳಿಂದ ರಕ್ಷಿಸುತ್ತದೆ.
- **ಇಲ್ಯಾಸ್ಟೋಮೆರಿಕ್:** ಇದು ಉಷ್ಣತೆಯಿಂದ ಹಿಗ್ಗುವ ಮತ್ತು ಕುಗ್ಗುವ ಕಾರಣವಾಗಿ ಉಂಟಾಗುವ ಒತ್ತಡವನ್ನು ತಡೆದುಕೊಳ್ಳಬಲ್ಲ ಉಚ್ಚ ಮಟ್ಟದ ಇಲ್ಯಾಸ್ಟೋಮೆರಿಕ್ ಗುಣಗಳನ್ನು ಹೊಂದಿದೆ.
- **ಬಿರುಕುಗಳನ್ನು ಮುಚ್ಚುವುದು:** ಇದರಲ್ಲಿ ಜರ್ಮನ್ ಇಲ್ಯಾಸ್ಟೋಮೆರಿಕ್ ಪಾಲಿಮರ್‌ಗಳು ಇರುವುದರಿಂದ ಇದು ಉತ್ಕೃಷ್ಟ ರೀತಿಯಲ್ಲಿ ಬಿರುಕುಗಳನ್ನು ಮುಚ್ಚುವ ಗುಣಗಳನ್ನು ಹೊಂದಿದೆ.
- **ಬಳಸುವುದು ಮತ್ತು ಕಾಯ್ದಿರಿಸಿಕೊಂಡು ಬರುವುದು:** ಇದು ಸಿಂಗಲ್ ಪ್ಯಾಕ್, ಬಿಳಿ ಸಿಮೆಂಟ್-ಆಧಾರಿತ ಪಾಲಿಮರ್ ಮಾಡಿಫೈಡ್ ಪೌಡರ್ ಪ್ರಾಡಕ್ಟ್ ಆಗಿದೆ.
- **ಬಿಳಿ ಪುಡಿ ನಿರ್ಮಾಣ ವಿರೋಧಿ:** ಇದು ಗೋಡೆಗಳ ಮೇಲೆ ಬಿಳಿ ಪುಡಿ ಉಂಟಾಗುವುದನ್ನು ತಡೆಯುತ್ತದೆ ಮತ್ತು ದೀರ್ಘಕಾಲದ ಪರಿಣಾಮವನ್ನು ನೀಡುತ್ತದೆ.
- **ಶಾಖದ ಪ್ರತಿಫಲನ ಮತ್ತು ಯುವಿ ನಿರೋಧಕ:** ಬಿಳಿ ಸಿಮೆಂಟ್ ಮತ್ತು ಬಿಳಿ ಅಡಿಟಿವ್‌ಗಳನ್ನು ಆಧರಿಸಿರುವ ಕಾರಣ, ಬಿಸಿಲಿಗೆ ತೆರೆದುಕೊಂಡ ಮೇಲ್ಮೈಗಳಿಗೆ ಹಚ್ಚಿದಾಗ, ಇದು ಹೆಚ್ಚು ಉತ್ತಮ ಮಟ್ಟದ ಯುವಿ ನಿರೋಧಕ ಪ್ರತಿಫಲನ ಹೊಂದಿರುವ ಕೋಟಿಂಗ್ ಆಗಿದೆ ಮತ್ತು 8-10°ಸೆಂ.ನಷ್ಟು ಶಾಖವನ್ನು ಕಡಿಮೆ ಮಾಡುತ್ತದೆ.
- **ಪರಿಸರ-ಸ್ನೇಹಿ:** ಇದರಲ್ಲಿ ವೊಲಟೈಲ್ ಆರ್ಗ್ಯಾನಿಕ್ ಕಾಂಪೌಂಡ್ ಇಲ್ಲ (VOC).
- **ಪಾಚಿ ಮತ್ತು ಫಂಗಸ್ ನಿರೋಧಕ**
- **ವಾರಂಟಿ:** ಈ ಪ್ರಾಡಕ್ಟ್ 8 ವರ್ಷಗಳ ವಾಟರ್‌ಪ್ರೂಫಿಂಗ್ ವಾರಂಟಿಯನ್ನು ಕೊಡುತ್ತದೆ.

### ಪ್ಯಾಕ್‌ಗಳು:

- 15 ಕೇಜಿ

## ಹೇಗೆ ಹಚ್ಚಬೇಕು

### ಮೇಲ್ಮೈ ಸಿದ್ಧತೆ

- ಎಮರಿ ಪೇಪರ್ (ಮರಳಿನ ಕಾಗದ), ಚಾಣ ಅಥವಾ ವೈರ್ ಬ್ರಶ್ ಇತ್ಯಾದಿಯನ್ನು ಉಪಯೋಗಿಸಿ ಮೇಲ್ಮೈಯಿಂದ ಕೊಳೆ, ಧೂಳು, ಜೈವಿಕ ದ್ರಾವಕ (ಡೀ-ಶಟರಿಂಗ್ / ಕ್ಯೂರಿಂಗ್ ಫ್ರೀ ಕಾಂಪೌಂಡ್) ಮತ್ತು ಎಣ್ಣೆ ಇತ್ಯಾದಿಯಂತಹ ಸಡಿಲವಾಗಿ ಅಂಟಿಕೊಂಡ ವಸ್ತುಗಳನ್ನು ತೆಗೆಯಿರಿ.
- ಮೇಲ್ಮೈಗಳಿಗೆ ಮರು-ಪೆಯಿಂಟಿಂಗ್ ಮಾಡುವಾಗ, ಮೊದಲು ಸೀಪ್ ಗಾರ್ಡ್ ವರ್ಟಿಕಲ್ ಸರ್ಫೇಸಸ್ ಹಚ್ಚಬೇಕಾದ ಮೇಲ್ಮೈಗಳಿಂದ ಹಳೆಯ ಪೆಯಿಂಟಿಂಗನ್ನು ತೆಗೆಯಿರಿ.
- ಬಿಳಿ ಪುಡಿ ಉಂಟಾಗಿದ್ದ ಪ್ರಸಂಗದಲ್ಲಿ, ಮೇಲ್ಮೈಯಿಂದ ಎಲ್ಲಾ ಸಡಿಲ ಕಣಗಳನ್ನೂ ತೆಗೆಯುವ ಸಲುವಾಗಿ, ಮೇಲ್ಮೈಯನ್ನು ಪೂರ್ತಿಯಾಗಿ ಸ್ವಚ್ಛ ಮಾಡಬೇಕು.
- ಮೇಲ್ಮೈಯನ್ನು ಸ್ವಚ್ಛ ನೀರಿನಿಂದ ಸರಿಯಾಗಿ ತೊಳೆಯಿರಿ ಮತ್ತು ಅದನ್ನು ಸಂಪೂರ್ಣವಾಗಿ ಒಣಗಲು ಬಿಡಿ. ಅದರ ನಂತರವೇ ಪ್ರಾಡಕ್ಟನ್ನು ಹಚ್ಚಿ.
- ಮೇಲ್ಮೈಯ ಬಿರುಕುಗಳನ್ನು ಬಿರುಕು ತುಂಬಿಸುವ ಪ್ರಾಡಕ್ಟ್‌ಗಳಿಂದ ತುಂಬಿಸಬೇಕು (3 ಎಮ್‌ಎಮ್) ಮತ್ತು ದೊಡ್ಡ ಬಿರುಕುಗಳು, ಹಾಳಾದ ಭಾಗಗಳು ಮತ್ತು ಟೊಳ್ಳು ಜಾಗಗಳನ್ನು ಬಿರ್ಲಾ ವೈಟ್ ಲೆವೆಲ್‌ಪ್ಲಾಸ್ಟ್‌ನಿಂದ (ಪಾಲಿಮರ್ ಸಿಮೆಂಟ್ ಮಾಡಿಫೈಡ್ ಮಾರ್ಟರ್ ಪ್ರಾಡಕ್ಟ್) ರಿಪೇರಿ ಮಾಡಬೇಕು.

### ಪ್ರೈಮಿಂಗ್ ಕೋಟ್

- ರಾಡಿಯನ್ನು ತಯಾರಿಸಲು 1 ಕೇಜಿ ಪ್ರಾಡಕ್ಟನ್ನು 100% ಸ್ವಚ್ಛ ನೀರಿಗೆ (ಪ್ರಾಡಕ್ಟ್‌ನ 1 ಕೇಜಿ + 1000 ಎಮ್‌ಎಲ್ ನೀರು) ನಿಧಾನವಾಗಿ ಸೇರಿಸಿ.
- ಅತ್ಯುತ್ತಮ ಪರ್ಫಾರ್ಮೆನ್ಸ್ ಪಡೆಯುವುದಕ್ಕೆ ಚೆನ್ನಾಗಿ ಮಿಶ್ರಗೊಳಿಸಿದ ನಂತರ ರಾಡಿಯನ್ನು 5 ನಿಮಿಷ ಹಾಗೆಯೇ ಇರಲು ಬಿಡಿ. ತಯಾರಿಸಿದ ರಾಡಿಯನ್ನು 1-1.5 ಗಂಟೆಯೊಳಗೆ ಬಳಸಬೇಕು.
- ಒಳ್ಳೆಯ ಮಿಶ್ರಣ ತಯಾರಿಸಿದ ನಂತರ ಪೆಯಿಂಟಿಂಗ್ ಬ್ರಶ್‌ನ ಸಹಾಯದಿಂದ ಸ್ವಚ್ಛ ಹಾಗೂ ಒಣಗಿದ ಗೋಡೆಯ / ಅಡಿ-ಪದರದ ಮೇಲ್ಮೈ ಮೇಲೆ ಏಕಪ್ರಕಾರವಾಗಿ ಪ್ರೈಮಿಂಗ್ ಕೋಟ್ ಮಾಡಿ.

### 1ನೇ ಮತ್ತು 2ನೇ ಕೋಟ್

- ರಾಡಿಯನ್ನು ತಯಾರಿಸಲು 1 ಕೇಜಿ ಪ್ರಾಡಕ್ಟನ್ನು 60%-65% ಸ್ವಚ್ಛ ನೀರಿಗೆ (ಪ್ರಾಡಕ್ಟ್‌ನ 1 ಕೇಜಿ + 600-650 ಎಮ್‌ಎಲ್ ನೀರು) ನಿಧಾನವಾಗಿ ಸೇರಿಸಿ.
- ಸಾಧ್ಯವಾದರೆ ಮಿಶ್ರಣವನ್ನು ಕದಡುವ ಯಂತ್ರದಿಂದ (mechanical stirrer) (3-5 ನಿಮಿಷಗಳು) ತಯಾರಿಸಬೇಕು.
- ಹೆಚ್ಚು ಉತ್ತಮವಾಗಿ ಅಂಟಿಕೊಳ್ಳುವುದಕ್ಕೆ ಮತ್ತು ಹೆಚ್ಚು ಕವರೇಜ್‌ಗೆ, ಒಳ್ಳೆಯ ಮಿಶ್ರಣ ತಯಾರಿಸಿದ ನಂತರ 4-6 ಗಂಟೆಗಳ ಮಧ್ಯಾಂತರದಲ್ಲಿ ಅಡ್ಡ ದಿಕ್ಕಿನಿಂದ ಪ್ರಾಡಕ್ಟ್‌ನ ಎರಡು ಕೋಟಿಂಗ್ ಮಾಡಿ.
- ಇತರ ಟಾಪ್ ಕೋಟ್ ಪ್ರಾಡಕ್ಟ್‌ಗಳನ್ನು ಹಚ್ಚುವ ಮೊದಲು ಈ ಮೇಲ್ಮೈಯನ್ನು ಸಂಪೂರ್ಣವಾಗಿ ಒಣಗಲು ಬಿಡಿ, ಸಾಧ್ಯವಾದರೆ 10-12 ಗಂಟೆಗಳ ಕಾಲ ಒಣಗಲು ಬಿಡಿ.
- ಎರಡೂ ಕೋಟಿಂಗ್‌ಗಳ ಒಟ್ಟು ದಪ್ಪ ಹೆಚ್ಚೆಂದರೆ 1 ಎಮ್‌ಎಮ್‌ಗೆ ಸೀಮಿತವಾಗಿರಬೇಕು.

### ಹೊರಾಂಗಣದ ಪ್ರೈಮರ್ ಮತ್ತು ಹೊರಾಂಗಣದ ಎಮಲ್ಷನ್ ಹಚ್ಚುವುದು

- ಬ್ರಶ್ / ರೋಲರ್ ಬಳಸಿ ಹೊರಾಂಗಣದ ಪ್ರೈಮರ್‌ನ ಸಿಂಗಲ್ ಕೋಟಿಂಗ್ ಮಾಡಿ 3-4 ಗಂಟೆಗಳ ಕಾಲ ಒಣಗಲು ಬಿಡಿ. ಅತ್ಯುತ್ತಮ ಫಲಿತಾಂಶಗಳಿಗೆ, ಬಿರ್ಲಾ ವೈಟ್ ಪ್ರೈಮಾ ಕೋಟ್ ಎಕ್ಸ್‌ಟೀರಿಯರ್ ಪ್ರೈಮರ್ ಬಳಸಿ.
- ಪ್ರೈಮರ್ ಹಚ್ಚಿದ ನಂತರ, ಎಕ್ಸ್‌ಟೀರಿಯರ್ ಎಮಲ್ಷನ್ ಟಾಪ್ ಕೋಟ್ ಪೆಯಿಂಟ್ ಹಚ್ಚಿ. ಅದು ವಾಟರ್‌ಪ್ರೂಫಿಂಗ್ ರಕ್ಷಣೆ ಕೊಡುತ್ತದೆ.

# ತಾಂತ್ರಿಕ ಮಾಹಿತಿ

| Properties | Seep Guard Vertical Surfaces | Test Method |
|---|---|---|
| Tensile Adhesion Strength (pull off) (n/mm²) @ 28 days | 1.59 | ASTM D7234 |
| Water Impermeability (Against Hydrostatic Pressure) (Bar) | Positive Side: Nil @ 5 bar & 2mm @7 bar<br>Negative Side: Pass @ 5 bar | EN 12390-8:2000 |
| Crack Bridging (MM) | No cracking up to 1.62 mm | EN 1062-7 |
| Alkali Resistance | No colour Change | IS 15489 |
| Fungal Resistant | Zero rating | ASTM G 21 |
| Coverage* Vertical Surface: Two coats on plaster/concrete surface (Priming coat with 100% +One coat with 60-65%, Sqft/Kg) | 24-26 | In-House |
| Coverage* Vertical Surface: Three coats on RCC/concrete surface (Priming coat with 100 %+Two coat with 60-65%, Sq.ft./Kg) | 14-16 | In-House |
| Pot Life, hrs. | 1.5 | In-House |
| Reduction of surface temp. at Noon time (°C) | 8-10 | In-House |

*This value is on ideal concrete surface; however, this may change according to surface pattern/ texture

### ಶೆಲ್ಫ್ ಲೈಫ್

ತೆರೆಯದೆ ಇರುವ ಮತ್ತು ಸರಿಯಾದ ಶೇಖರಣೆಯ ಪರಿಸ್ಥಿತಿಗಳಲ್ಲಿ ಇಟ್ಟರೆ, ಉತ್ಪಾದಿಸಿದ ತಿಂಗಳಿಂದ 12 ತಿಂಗಳ ವರೆಗೆ



ಸರಿಸಾಟಿಯಿಲ್ಲದ ಬಿಳುಪು




ನೀರಿನ ಅತ್ಯಧಿಕ ನಿರೋಧಕ




ಮೇಲ್ಮೈ ಉಷ್ಣತೆಯನ್ನು ಕಡಿಮೆ ಮಾಡುತ್ತದೆ





# SEEPGUARD

WATERPROOFING SOLUTIONS

## VERTICAL SURFACES

Waterproofing 8 year* Warranty